Carrying on
The 9th Year Tradition of
Service To Digital Society

Digital Society Foundation
[Registered Charitable Trust]

Affiliated
to
Cyber Law College

"Ujvala", 37, 20th Main, B.S.K.Stage I, Bangalore 560050
E-Mail: dsfoundation@gmail.com :Web:
www.dsfoundation.in
Ph: 9343 55 4943 : 41124431

# ಪತ್ರಿಕಾ ಪ್ರಕಟನೆ

ಹೆಚ್ಚುತ್ತಿರುವ ಸೈಬರ್ ಅಪರಾಧಗಳ ಹಿನ್ನಲೆಯಲ್ಲಿ, ಭಾರತದ ಸರಕಾರ, ಮಾಹಿತಿ ತಂತ್ರಜ್ಞಾನ ಕಾಯಿದೆಗೆ ಒಂದು ಹೊಸ ರೂಪ ಕೊಡಲಿರುವ ಸುದ್ದಿ ಇಂದು ತಾನೇ ಹೊರಬಿದ್ದಿದೆ. ಈ ಸಂದರ್ಭದಲ್ಲಿ ಕೆಲವೇ ದಿನಗಳ ಹಿಂದೆ, ಭಾರತದಲ್ಲಿ ಗಣಕ ಪತ್ರಗಳಿಗೆ ಕಾನೂನಿನ ಮನ್ನಣೆಯೇ ಇರಲಿಲ್ಲವೆಂದು ನೆನಪಿಸಿಕೊಂಡಾಗ ನಮಗೆ ಅಕ್ಟೋಬರ್ ೧೭, ೨೦೦೦, ಭಾರತದ ಇತಿಹಾಸದಲ್ಲಿ ನೆನಪಿನಲ್ಲಿಡಬೇಕಾದ ದಿನ ಎಂಬುದು ಅರಿವಾಗುತ್ತದೆ. ಏಕೆಂದರೆ ಅಂದು ಮೊದಲ ಬಾರಿಗೆ, ಗಣಕ ಪತ್ರಗಳಿಗೆ ಕಾನೂನಿನ ಮನ್ನಣೆ ದೊರಕಿತು. ಅಲ್ಲದೆ ಗಣಕ ಪತ್ರಗಳಿಗೆ ಸಹಿ ಹಾಕುವ ಬಗೆಯೂ ಕೂಡಾ ಕಾನೂನಿನ ಪ್ರಕಾರ ನಿಶ್ಚಯವಾಯಿತು. ಆದ್ದರಿಂದ ಭಾರತದಲ್ಲಿ ಗಣಕ ಪತ್ರಗಳನ್ನು ಉಪಯೋಗಿಸಿ ಕಾನೂನು ಬದ್ಧವಾದ ಒಪ್ಪಂದಗಳನ್ನು ಮಾಡಿಕೊಳ್ಳಲು ಸಹಾಯ ವಾಯಿತು. ಇದೆಲ್ಲದರ ಮೂಲಕ ಭಾರತದಲ್ಲಿ ಕಾನೂನು ಬದ್ಧ "ಗಣಕ ಸಮಾಜ" ಸೃಷ್ಟಿಯಾಯಿತು ಎನ್ನಬಹುದು. ಈ ಕಾನೂನು ಜಾರಿಯಾದದ್ದು ಮಾಹಿತಿ ತಂತ್ರ ಜ್ಞಾನ ಕಾಯಿದೆ–೨೦೦೦ (ಮಾತಂಕಾ–೨೦೦೦) ಮೂಲಕ.

ಭಾರತದ ಇಂದಿನ ಆರ್ಥಿಕ ಬೆಳವಣಿಗೆಯನ್ನು ಗಮನಿಸಿದರೆ, ಇ–ಸಮಾಜ ನಮ್ಮ ಆರ್ಥಿಕ ಬೆಳವಣಿಗೆಯ ಪ್ರಮುಖ ಅಂಶ ಎಂಬುದು ನಿರ್ವಿವಾದ. ಹೀಗಾಗಿ ಅಕ್ಟೋಬರ್ ೧೭, ನಮ್ಮ ದೇಶದಲ್ಲಿ ಚರಿತ್ರಾರ್ಹ ದಿನ ಎಂದು ಕರೆಯಬಹುದು.

ಇವೆಲ್ಲಾ ಆಗುಹೋಗುಗಳನ್ನು ಗಮನದಲ್ಲಿಟ್ಟುಕೊಂಡು, ಡಿಜಿಟಲ್ ಸೊಸೈಟಿ ಫೌಂಡೇಶನ್, ಅಕ್ಟೋಬರ್ ೧೭ ದಿನವನ್ನು, ಭಾರತದಲ್ಲಿ "ಗಣಕ ಸಮಾಜದ ದಿನಾಚರಣೆ" ಎಂದು ಕೊಂಡಾಡಲು ನಿಶ್ಚಯಿಸಿದೆ. ಅಲ್ಲದೆ, ಪ್ರತಿ ವರ್ಷ ಈ ದಿನಾಚರಣೆಯ ಅಂಗವಾಗಿ ಸೂಕ್ತ ಕಾರ್ಯಕ್ರಮಗಳನ್ನು ನಡೆಸಲು ನಿಶ್ಚಯಿಸಿದೆ.

ಈ ಬಗ್ಗೆ ಸಾರ್ವಜನಿಕ ಘೋಷಣೆಯನ್ನು ಇಂದು ಮಾನ್ಯ ಹೈಕೋರ್ಟ್ ನ್ಯಾಯಾಧೀಶರಾದಂತ ಶ್ರೀ ಎನ್. ಕುಮಾರ್ ರವರು ಮಾಡಲಿದ್ದಾರೆ. ಈ ಸಂದರ್ಭದಲ್ಲಿ ಬೆಂಗಳೂರಿನ ಸೆಂಚುರಿ ಕ್ಲಬ್‌ನ ವಡೆಯರ್ ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ, ಕರ್ನಾಟಕದ ಮಾಹಿತಿ ತಂತ್ರಜ್ಞಾನ ನಿರ್ದೇಶಕರಾದ ಶ್ರೀ ಎಮ್.ಎನ್. ವಿದ್ಯಾಶಂಕರ್ ರವರೂ ಹಾಗೂ ಮತ್ತಿತರ ಗಣ್ಯರು ಭಾಗವಹಿಸಲಿದ್ದಾರೆ.

ಇದೇ ಕಾರ್ಯಕ್ರಮದಲ್ಲಿ, ಡಿಜಿಟಲ್ ಸೊಸೈಟಿ ಫೌಂಡೇಶನ್ ಪರವಾಗಿ ಕೆಳಕಂಡ ಮೂರು ವಾರ್ಷಿಕ ಪ್ರಶಸ್ತಿಗಳನ್ನು ಕೊಡಲು ತೀರ್ಮಾನಿಸಲಾಗಿದೆ.

೧. ಸೈಬರ್ ಕಾನೂನಿನ ಅರಿವನ್ನು ಹೆಚ್ಚಿಸಲು ಅತ್ಯುತ್ತಮ ಕೆಲಸ ಮಾಡಿದ ವರದಿಗಾರ

೨. "ಸೈಬರ್ ಕಾನೂನು ಬದಲಾವಣೆ" ಎಂಬ ವಸ್ತುವಿನ ಮೇಲೆ ಲಾ ಕಾಲೇಜ್ ವಿದ್ಯಾರ್ಥಿಯ ಅತ್ಯುತ್ತಮ ಪ್ರಭಂಧ.

೩. ಸೈಬರ್ ಕಾನೂನಿನ ಅಳವಡಿಕೆಯಲ್ಲಿ ಅತ್ಯುತ್ತಮ ಪ್ರಯತ್ನ ನಡೆಸಿದ ಸೈಬರ್ ಕೆಫೆ.

ಈ ಪ್ರಶಸ್ತಿಗಳ ಉದ್ದೇಶ ಜನ ಸಾಮಾನ್ಯರಲ್ಲಿ ಸೈಬರ್ ಕಾನೂನಿನ ಅರಿವನ್ನು ಹೆಚ್ಚಿಸಿ, ವ್ಯವಹಾರದಲ್ಲಿ ಕಾನೂನನ್ನು ಅಳವಡಿಸುವುದರ ಬಗ್ಗೆ ಆಸಕ್ತಿ ಮೂಡಿಸುವುದು.

ಇದೇ ಸಂದರ್ಭದಲ್ಲಿ ಕರ್ನಾಟಕ ಸೈಬರ್ ಕಾನೂನು ಪ್ರಜ್ಞಾಂದೋಳನ ಕಾರ್ಯಕ್ರಮದಲ್ಲಿ ಕರ್ಣಾಟಕದ ಲಾ ಕಾಲೇಜುಗಳಲ್ಲಿ ಮಾಹಿತಿ ಉಪನ್ಯಾಸವನ್ನು ಕೊಡಲು ಡಿಜಿಟಲ್ ಸೊಸೈಟಿ ಫೌಂಡೇಶನ್ ನಿಂದ ವ್ಯವಸ್ಥೆ ಮಾಡಲಾಗುವುದು. ಈ ಲಾ ಕಾಲೇಜುಗಳ ಮೂಲಕವೇ ಸೈಬರ್ ಕೆಫೆಗಳಲ್ಲಿ ಕೂಡಾ ಕಾನೂನಿನ ಅರಿವನ್ನು ಮೂಡಿಸುವ ಪ್ರಯತ್ನ ಮಾಡಲಾಗುವುದು.

ಇದಲ್ಲದೆ, ಗಣಕ ಸಮಾಜದಿಂದ ನಮ್ಮ ಹಳ್ಳಿಯ ರೈತರಿಗೆ ಹೆಚ್ಚಿನ ಅಭ್ಯುದಯವನ್ನು ತರುವಂತಹ ಕೆಲವು ಯೋಜನೆಗಳನ್ನು ಕೂಡಾ ಡಿಜಿಟಲ್ ಸೊಸೈಟಿ ಫೌಂಡೇಶನ್ ಹಾಕಿಕೊಂಡಿದೆ.

ನಾ.ವಿಜಯಶಂಕರ
ಚೇರ್ ಮನ್
೧೭-೧೦-೨೦೦೬

Carrying on
The 9th Year Tradition of
Service To Digital Society

Digital Society Foundation
[Registered Charitable Trust]

Affiliated
to
Cyber Law College

"Ujvala", 37, 20th Main, B.S.K.Stage I, Bangalore 560050
E-Mail: dsfoundation@gmail.com :Web:
www.dsfoundation.in
Ph: 9343 55 4943 : 41124431

---

# Press Release

Whenever there is a report of a Cyber Crime in India, there is a demand for better laws to punish the culprits and assure the industry that India is a country where it is safe to transact IT business. It is to be noted that just yesterday, the Union Cabinet has approved some amendments to the Information Technology Act 2000 for strengthening the laws in India in the light of the recent data theft case reported from Gurugaon.

At this time we need to reflect that not so long ago, our country did not even have legal recognition for Electronic documents let alone for sophisticated Cyber crimes. It was on October 17, 2000 that India for the first time started recognizing electronic documents. Simultaneously the concept of Digital Signatures was introduced legal recognition was provided for the same. Also, several Cyber Crimes were also recognized. These developments made a "Legally Recognized Digital Society" to come into existence in India. We have since realized how important is this law when it comes to development of IT business in India.

To recognize the importance of this seminal development in the e-history of India, Digital Society Foundation has decided to commemorate October 17th as the "Digital Society Day".

A formal declaration of "October 17" as "Digital Society Day" is being made by Honourable Justice Mr N.Kumar at a simple function at Century Club, Bangalore, at 6.30 pm. Mr M.N.Vdyashankar, I.T Secretary of Government of Karnataka and several other dignitaries are participating in the function and sharing their perceptions on ITA-2000.

The programme is supported by the Computer Society of India, Bangalore Chapter.

In order to bring better awareness in the market about the prevalent laws, Digital Society Foundation is instituting three annual awards aimed at sensitization of the members of the society for the benefits brought in by the creation of a responsible Digital Society.

The three awards are:

1. Best Journalistic effort in promoting awareness of Cyber Laws in India
2. Best project by a student of a law college on the topic "Amendments to ITA-2000", and
3. Best Cyber Law Compliance in a Cyber Café

The awards will be based on the work during the period from today upto July 31, 2007. The nominations would be assessed by a suitable committee and awards would be given on October 17, 2007.

Cyber Law College, a pioneering Cyber Law Education institution would be sponsoring the awards. Other corporates are also expected to take part in this noble effort at incentivising contributions towards creation of a better Digital Society. Complete details of the terms and conditions underwhich the award will be presented will soon be available on the website www.dsfoundation.in.

Additionally, Digital Society Foundation is taking steps to initiate projects by which the prosperity of Digital Society can rub on to the rural population so that the dreaded "Digital Divide" is suitably bridged. A project in bringing Carbon Credit exchange rewards to the farmer community is one of such projects.

Digital Society Foundation also offers to visit as many of the law colleges in Karnataka as possible over the next year to spread awareness of Cyber Laws. During these meetings, Cyber Café owners and IT and non IT companies in the respective areas as well as the law enforcement machinery would be reached out to create an all round Cyber Law awareness.

For Digital Society Foundation

Chairman